


## ನುಲಿಯ ಚಂದಯ್ಯ ಮಂಟಪ

12ನೇ ಶತಮಾನದ ಶಿವಶರಣ ಕಾಯಕಯೋಗಿ ನುಲಿಯ ಚಂದಯ್ಯನ ಶಿಲಾ ಸಮಾಧಿ ಮಂಟಪವು ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ರಾಮಗಿರಿ ಸಮೀಪದ ನುಲೇನೂರು ಗ್ರಾಮದಲ್ಲಿದೆ. ಹಗ್ಗ ಹೊಸೆಯುವ ಕಾಯಕದ ನೂಲಿಯ ಚಂದಯ್ಯ ಶ್ರಮದಿಂದಲೇ ಬದುಕಬೇಕು ಎನ್ನುವುದನ್ನು ಸಾಧಿಸಿ ತೋರಿಸಿದ್ದಾರೆ. ಅವರು ಕಟ್ಟಿಸಿದ ಬಾವಿ, ಹೊಂಡ, ಕೆರೆ ಇಂದಿಗೂ ಇಲ್ಲಿ ಕಾಣಬಹುದು. ವಿಜಯಪುರದಿಂದ ಇಲ್ಲಿಗೆ ಬಂದಿದ್ದ ಅವರು ಇಲ್ಲೇ ಲಿಂಗೈಕ್ಯರಾಗಿದ್ದಾರೆ. ಅವರ ಕಾಯಕದ ಹೆಸರೇ ಈ ಗ್ರಾಮಕ್ಕೂ ಬಂದಿರುವುದು ವಿಶೇಷ.

**-ಎನ್.ಎಸ್.ಅಶ್ವಿನಿ ಸಂತೋಷ್, ಚಿತ್ರದುರ್ಗ**

## ಮಧುರಚನ್ನ

'ಜನರಾಡಿಕೊಳ್ಳಬಹುದು ನನಗೂ ನಿನಗೂ ಕೂಡಿ ಅವರೇನು ಬಲ್ಲರು ಒಳ ನಿಧಾನ. ನನಗೆ ನೀನತಿ ಮಧುರ ನಿನಗೆ ನಾ ಬಲು ಚನ್ನ ಹೀಗಂತಲೆ ನಾ ಮಧುರಚನ್ನ' ಎಂದರು. ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ಹಲಸಂಗಿ ಗ್ರಾಮದ ಚನ್ನಮಲ್ಲಪ್ಪ. ಅವರ ಕಾವ್ಯನಾಮ 'ಮಧುರಚನ್ನ'. ಇದು ಹೇಗೆ ಬಂತು ಎಂಬುದಕ್ಕೆ 'ನನ್ನ ನಲ್ಲ' ಸಂಕಲನದಲ್ಲಿ ವಿವರಿಸಿದ್ದಾರೆ. ಅವರ ಆತ್ಮೀಯ ಮಿತ್ರ ಮಾದಣ್ಣನಿಗೆ ಮಧುರ ಎನ್ನುತ್ತಿದ್ದರು. ಇವರು ಚನ್ನಮಲ್ಲಪ್ಪ ಎಂಬುದಕ್ಕೆ ಚನ್ನ ಎಂದ್ಹೇಳಿ ಈ ಕಾವ್ಯನಾಮ ಸೃಷ್ಟಿಸಿದ್ದಾರೆ. ಅವರ ಕಾಲ 31.07.1903–15.08.1953. ಶ್ರಾವಣ ಮಾಸದ ಶರಾಳಷಷ್ಠಿ ದಿನ ಜನಿಸಿದ್ದ ಅವರು ಅಂದೇ ವಿಧಿವಶರಾಗುತ್ತಾರೆ. ಇದು ವಿಶೇಷ ಎಂದು ಮಾಹಿತಿ ನೀಡುತ್ತಾರೆ ಅವರ ಮೊಮ್ಮಗ ಜಿ.ಎಸ್. ಗಲಗಲಿ.

**-ಪಂಡಿತರಾವ ಪಾಟೀಲ, ವಿಜಯಪುರ**





## ಟಪಾಲು ಬಂದಿದೆ ತಗೊಳ್ಳಿ

ಶ್ರೀಕ್ಷೇತ್ರ ಧರ್ಮಸ್ಥಳದ ದೇವಸ್ಥಾನದ ಪಕ್ಕದಲ್ಲಿ ಗಾರ್ಡನ್ ಇದೆ. ಗಾಡರ್ನ್ ಒಳಗೆ ಹೋದರೆ ಅಲ್ಲಿ ಹಲವಾರು ಪ್ರತಿಮೆಗಳು. ಅವುಗಳಲ್ಲಿ ವಿಶೇಷವಾಗಿ ಕಾಣುವುದು ಅಂಚೆ ಅಣ್ಣನ ಪ್ರತಿಮೆ. ಯಾರಿಗೊ ಟಪಾಲು ಕೊಡಲು ನಿಂತಿರುವನಂತೆ ಕಾಣುತ್ತಾನೆ. ಇಂದು ಅಂಚೆ ಅಣ್ಣನ ಸೇವೆ ಕಡಿಮೆಯಾಗಿದೆ. ಏನಾದರೇನಂತೆ ಕ್ಷೇತ್ರಕ್ಕೆ ಬರುವ ಭಕ್ತರನ್ನು ತನ್ನತ್ತ ಸೆಳೆಯುತ್ತಿದ್ದಾನೆ.

**-ಜಗದೀಶ ಎಂ. ಸಂಗಣ್ಣವರ, ಬೈಲಹೊಂಗಲ**